1) ಒಟ್ಟು ಗ್ರಾಮ ಪಂಚಾಯತಿಗಳು : 33

2) ಒಟ್ಟು ಗ್ರಾಮಗಳು : 118

3) ಒಟ್ಟು ಮನೆಗಳು : 46239

4) ಬಿಪಿಎಲ್ ಮನೆಗಳು : 24058

5) ಎಪಿಎಲ್ ಮನೆಗಳು : 22181

(ಕೇಂದ್ರ ಸರ್ಕಾರದಿಂದ ಅನುಮೋದನೆಗೊಂಡ PIP ಪ್ರಕಾರ)

ಆ) ಇಲ್ಲ.

ಇ) ಶೌಚಾಲಯಗಳನ್ನು ಜಲ ನಿರ್ಮಲ ಯೋಜನೆ & ಸಂಪೂರ್ಣ ಸ್ವಚ್ಛತಾ ಆಂದೋಲನ ಕಾರ್ಯಕ್ರಮದಿಂದ ನಿರ್ಮಿಸಲಾಗಿದೆ.

	BPL	APL	Total
TSC Achievement	3468	6547	10015
Jal Nirmal Achievement	12193	8262	20455
Grand Total	15661	14809	30470

ಈ) ಪ್ರತಿ ಬಿಪಿಎಲ್ ಕುಟುಂಬಕ್ಕೆ ರೂ. 3000/– ಪ್ರೋತ್ಸಾಹ ಧನ ನೀಡಲಾಗುತ್ತಿದೆ.

ಕೇಂದ್ರ ಸರ್ಕಾರದಿಂದ 50% (ರೂ. 1500/–)

ರಾಜ್ಯ ಸರ್ಕಾರದಿಂದ 50% (ರೂ. 1500/–)

ಉ) ಇಲ್ಲ

ಊ) ಅನ್ವಯಿಸುವುದಿಲ್ಲ.

ಋ) ಬೀದರ್ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಸಂಪೂರ್ಣ ಸ್ವಚ್ಛತಾ ಆಂದೋಲನದ ವತಿಯಿಂದ ಯಾವುದೇ ಸಮುದಾಯ ಶೌಚಾಲಯ ನಿರ್ಮಿಸಿಲ್ಲ.

ಎ) ಯಾವುದೇ ಗ್ರಾಮ ಶೇ. 100ರಷ್ಟು ಸಾಧನೆ ಮಾಡಿಲ್ಲದ ಕಾರಣ, ತಾಲ್ಲೂಕಿನ ಎಲ್ಲಾ ಗ್ರಾಮಗಳಲ್ಲೂ ಶೌಚಾಲಯ ನಿರ್ಮಿಸಬೇಕಾಗಿದೆ.

ಐ) ಉಳಿದಿರುವ ಎಲ್ಲಾ ಗ್ರಾಮಗಳಲ್ಲೂ ಶೌಚಾಲಯ ನಿರ್ಮಾಣ ಕಾರ್ಯ ಪ್ರಾರಂಭಿಸಿದೆ ಹಾಗೂ ಮುಂದಿನ ಎರಡು ವರ್ಷಗಳಲ್ಲಿ ಸಂಪೂರ್ಣ ಮುಕ್ತಾಯಗೊಳಿಸಲು ಪ್ರಯತ್ನ ಮಾಡಲಾಗುತ್ತಿದೆ.

ರಾಜ್ಯ ಮತ್ತು ಹೊರರಾಜ್ಯದ ಮಂದಿರ ಮತ್ತು ಮಠಗಳಿಗೆ ಅನುದಾನ ಬಿಡುಗಡೆ

844(82) ಶ್ರೀ ಬಂಡೆಪ್ಪ ಕಾಶೆಂಪೂರ (ಬೀದರ್ ದಕ್ಷಿಣ) : ಮಾನ್ಯ ಉನ್ನತ ಶಿಕ್ಷಣ, ಯೋಜನೆ, ಸಾಂಖ್ಯಿಕ, ಮುಜರಾಯಿ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಎರಡು ವರ್ಷಗಳಲ್ಲಿ ರಾಜ್ಯದ ಹಾಗೂ ಹೊರ ರಾಜ್ಯದ ದೇವಸ್ಥಾನ ಮತ್ತು ಮಠಗಳಿಗೆ ಸರ್ಕಾರ ಇದುವರೆಗೂ ನೀಡಿರುವ ಅನುದಾನವೆಷ್ಟು ; (ಹೊರರಾಜ್ಯಗಳನ್ನೊಳಗೊಂಡ ಪೂರ್ಣ ಮಾಹಿತಿ ನೀಡುವುದು) ;

ಆ) ಇದುವರೆವಿಗೂ ದೇವಸ್ಥಾನ ಮತ್ತು ಮಠಗಳಿಗೆ ನೀಡಿರುವ ಅನುದಾನದಿಂದ ಅವುಗಳ ಜೀರ್ಣೋದ್ಧಾರದ ಕಾರ್ಯ ಪ್ರಾರಂಭವಾಗಿದೆಯೇ ;

ಇ) ಹಾಗಿದ್ದಲ್ಲಿ, ಈಗ ಕಾರ್ಯವು ಯಾವ ಹಂತದಲ್ಲಿದೆ ;

ಈ) ಕಳೆದ ಎರಡು ವರ್ಷಗಳಿಂದ ಮಠಗಳಿಗೆ ನೀಡುತ್ತಿರುವ ಅನುದಾನದಿಂದ ಸರ್ಕಾರದ ಬೋಕ್ಕಸಕ್ಕಾಗಿರುವ ನಷ್ಟವೆಷ್ಟು ; (ವಿವರ ನೀಡುವುದು) ?

ಡಾ : ವಿ.ಎಸ್. ಆಚಾರ್ಯ (ಉನ್ನತ ಶಿಕ್ಷಣ, ಯೋಜನೆ, ಸಾಂಖ್ಯಿಕ, ಮುಜರಾಯಿ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು) :

ಅ) ಅನುದಾನ ಒಟ್ಟು ರೂ. 9348.76 ಲಕ್ಷಗಳು

(ವಿವರ ಅನುಬಂಧದಲ್ಲಿ ಸಲ್ಲಿಸಿದೆ.

ಆ) ದೇವಸ್ಥಾನ ಮತ್ತು ಮಠ ಮಾನ್ಯಗಳಿಗೆ ನೀಡಿರುವ ಅನುದಾನದಿಂದ ಅವುಗಳ ಜೀರ್ಣೋದ್ಧಾರ ಕಾರ್ಯ ಪ್ರಾಂಭಿಸಲು